ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 743 /2019

ಸಿ.ಡಬ್ಲೂ:4 ಪಿ.ಡಬ್ಲೂ:5

ಸಾಕ್ಷಿಗೆ ದಿನಾಂಕ ः- 24/08/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಾಲಚಂದ್ರ |
| ತಂ/ಗಂ. ಹೆಸರು | ಮನೋಜ ಬಿಸ್ಸೆ |
| ವಯಸ್ಸು | 24 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಿಂದಗಿ |

ಮುಖ್ಯ ವಿಚಾರಣೆ ः ಶ್ರೀ ಎಪಿಪಿ ಯವರಿಂದ

ಚಾ ಸಾ 1 ಮತ್ತು 6 ಪರಿಚಯ ಇದೆ. ಉಳಿದ ಸಾಕ್ಷಿದಾರರ ಗೊತ್ತು.ದಿನಾಂಕ 29-07-2019 ರಂದು ನಾನು, ನನ್ನ ಚಿಕ್ಕಪ್ಪ, ಮಾರುತಿ, ಚಾ ಸಾ 6 ಮತ್ತು ಗೀತಾ ಇವರು ನನ್ನ ಟಾಟಾ ಏಸಿ ಮೂಲಕ ಶಿವಣಗಿ ಗ್ರಾಮದ ಅಂಬಾಭವಾನಿ ಜಾತ್ರೆಗೆ ಹೋಗಿರುತ್ತೇವೆ. ಮರಳಿ ಬರುವಾಗ ಮಾರತಿ ಮೂತ್ರ ವಿಸರ್ಜನೆ ಮಾಡಲು ಹೋಗುತ್ತೇನೆ ಎಂದು ಹೇಳಿದನು. ನಂತರ ನಾನು ಕೂಡಾ ಇಂಡಿಕೇಟರ ಹಚ್ಚಿ ರಸ್ತೆ ಬದಿಗೆ ನನ್ನ ವಾಹನವನ್ನು ನಿಲ್ಲಿಸಿ ಮೂತ್ರ ವಿಸರ್ಜನೆಗೆ ಹೋಗಿದ್ದೆ. ನಂತರ ಮಳೆ ಬರಲು ಪ್ರಾರಂಭವಾಯಿತು. ನಂತರ ಮಳೆ ಒಳಗಡೆ ಹೋಗುವದನ್ನು ತಡೆಯಲು ಮಾರುತಿ ತಾಡಪತ್ರೆಯನ್ನುಕಟ್ಟುತ್ತಿದ್ದ. ನಾನು ಆತನ ಪಕ್ಕದಲ್ಲಿ ನಿಂತಿದ್ದೆ. ಒಬ್ಬ ಮೋಟಾರ್ ಸೈಕಲ ಚಾಲಕ ಅತೀ ವೇಗವಾಗಿ ಶಿವಣಗಿಯಿಂದ ಬಂದು ಮಾರುತಿಗೆ ಡಿಕ್ಕಿಪಡಿಸಿರುತ್ತಾನೆ. ಸದರಿ ಅಪಘಾತವಾದ ದೇವರ ಹಿಪ್ಪರಗಿಯಿಂದ 4 ಕಿ ಮೀ ಅಂತರದಲ್ಲಿತ್ತು.

ಸದರಿ ಅಪಘಾತದಲ್ಲಿ ಮಾರುತಿಗೆ ತಲೆಗೆ, ಹೊಟ್ಟೆಗೆ ತೀವ್ರ ಸ್ವರೂಪದ ಗಾಯವಾಗಿ ಕಿವಿಯಿಂದ ರಕ್ತ ಸೋರುತ್ತಿತ್ತು. ಅಪಘಾತಪಡಿಸಿದ ಮೊಟಾರ್ ಸೈಕಲ ಚಾಲಕನಿಗೂ ಕೂಡಾ ಗಾಯಗಳಾಗಿದ್ದವು. ನಂತರ ಮೋಟಾರ್ ಸೈಕಲ್ ಚಾಲಕನನ್ನು ಆ್ಯಂಬುಲೇನ್ಸ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಮಾರುತಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಆಗ ರಾತ್ರಿ 11.30 ಗಂಟೆ ಆಗಿತ್ತು. ಟಾಟಾ ಏಸ್ ವಾಹನದ ಸಂಖ್ಯೆ. ಕೆಎ 28 ಎ 7348 ಅಪಘಾತಪಡಿಸಿದ ಮೋಟಾರ್ ಸೈಕಲ್ ಸಂಖ್ಯೆ. 0595 ಅಂತ ಇರುತ್ತದೆ. ಸದರಿ ಮೋಟಾರ್ ಸೈಕಲ್ ಚಾಲಕನನ್ನು ಆ ದಿನ ನೋಡಿರುತ್ತೇನೆ. ಆತ ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ಆತನ ಹೆಸರು ಈಗ ನನಗೆ ಸರಿಯಾಗಿ ನೆನಪಿಲ್ಲ. ನಾನು ಪೋಲಿಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ. ಅಪಘಾತ ಸೈಕಲ್ ಮೋಟಾರ್ ಚಾಲಕನಿಂದ ಸಂಭವಿಸಿರುತ್ತದೆ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ</u>

ಮೋಟಾರ್ ಸೈಕಲ್ ಸಂಖ್ಯೆ. ಎಂ ಹೆಚ್ 07 ಬಿ 0595 ಅಂತ ಇರುತ್ತದೆ ಎಂದರೆ ನಿಜ. ಆತನ ಹೆಸರು ರಿಯಾಜ್ ತಾಳಿಕೋಟೆ ಅಂತಾ ಇತ್ತು ಎಂದರೆ ನಿಜ.

ಪಾಟೀ ಸವಾಲು ಶ್ರೀಮತಿ ಆರ್ ಎಮ್ ಶಿ ವಕೀಲರಿಂದ

ಗೂಡ್ಸ ವಾಹನ ನನ್ನದು ಅದರಲ್ಲಿ ಮಾರುತಿ,ಗೀತಾ ಭರತ, ಸ್ವಾತೀ, ಪ್ರಿಯಾಂಕ ಮತ್ತು ನಾನು ಇದ್ದೇವು. ನಮ್ಮನ್ನು ಹೊರತುಡಿಸಿ ಬೇರೆ ಯಾರು ಇದ್ದಿರಲಿಲ್ಲ. ನಾನು ಮಾರುತಿಯ ಅಣ್ಣನ ಮಗ. ಗಾಡಿಯ ವಾಹನದ ಎಡಬಾಜು ನಾನು ಇದ್ದೆ ಬಲಬಾಜು ಮಾರುತಿ ಇದ್ದ ಇಬ್ಬರು ತಾಡ ಪತ್ರೆ ಕಟ್ಟುತ್ತಿದ್ದೇವು. ಕತ್ತಲೆ ಇತ್ತು ಎಂದರೆ ನಿಜ ಆದರೆ ನಾನು ಇಂಡಿಕೇಟರ್ ಹಾಕಿದ್ದೆ. ನಾನು ಇಂಡಿಕೇಟರ್ ಹಾಕದೇ ಇರುವ ಕಾರಣ ಮೋಟಾರ್ ಸೈಕಲ್ ವಾಹನ ಚಲಾಕನಿಗೆ ಕಾಣಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವಾಗುವುದನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಗೀತಾ ಉಳಿದವರು ಸಂಬಂಧಿಕರು ಎಂದರೆ ನಿಜ. ಸದರಿ ಅಪಘಾತ ನನ್ನ ತಪ್ಪಿನಿಂದಾಗಿ ಸಂಭವಿಸ್ದಿರು ಕೂಡಾ ನಾವು ಆರೋಪಿಯ ವಿರುದ್ದ ಸುಳ್ಳು ದೂರು ಕೊಟ್ಟಿರುತ್ತೆವೆ ಎಂದರೆ ಸರಿಯಲ್ಲ. ದೂರನ್ನು ನನ್ನ ಚಿಕ್ಕಮ್ಮ ಕೊಟ್ಟಿದ್ದು ಅದನ್ನು ಗಾಡಿಯ ಮುಂದೆ ನೀಡಿರುತ್ತಾಳೆ.

ಅಪಘಾತ ನನ್ನ ತಪ್ಪಿ ನಿಂದಾರು ಕೂಡಾ ವಿಮೆ ಪರಿಹಾಕ್ಕಾಗಿ ಸುಳ್ಳು ಸಾಕ್ಷ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣ ಆತನ ಹೊರಿಸಲಾಗಿದೆ ಎಂದರೆ ನಿಜ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಶ್ರೀ ಎಪಿಪಿ ಯವರಿಂದ

ಈಗ ನನಗೆ ಒಂದು ದಾಖಲೆ ತೋರಿಸಲಾಗಿ ಅದು ಸ್ಥಳ ಪಂಚನಾಮೆಯಾಗಿದ್ದು ಅದರ ಮೇಲೆ ನನ್ನ ಸಹಿ ಅದೇ ದಿನ ಮಾಡಿರುತ್ತೇನೆ. ದಾಖಲೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ನಿಪಿ. 3 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ. 5 ಭಾವ ಚಿತ್ರ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮತ್ತೊಂದು ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು

ಅದನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ನಿಪಿ. 6 ಸಿ ಎಂದು ಗುರುತಿಸಲಾಯಿತು. ವಾಹನಗಳ ಎರಡು ಭಾವಚಿತ್ರ ನೋಡಿದರೆ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ. 6 ಮತ್ತು 7 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಶ್ರೀಮತಿ ಆರ್ ಎಮ್ ಶಿ ವಕೀಲರಿಂದ

ನಿಪಿ. 3 ಮತ್ತು 6 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಘಟನೆ ನೋಡಿದ್ದನ್ನು ಹೊರತುಪಡಿಸಿ ಬೇರೆ ಯಾವುದೇ ಘಟನೆ ನನ್ನ ಸಮಕ್ಷಮ ಆಗಿಲ್ಲ ಎಂದರೆ ನಿಜ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ